

# ಆಲಿಯಾ
## ದಿ ಡಿಫರೆಂಟ್

ಆಲಿಯಾ ಭಟ್ ಬಾಲಿವುಡ್‌ನಲ್ಲಿ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿರುವಾಕೆ. ಆಕೆ ಒಪ್ಪಿಕೊಳ್ಳುತ್ತಿರುವ ಪ್ರತಿಯೊಂದು ಪಾತ್ರಗಳೂ ಆಕೆಗೆ ಹೆಸರು ತಂದುಕೊಡುತ್ತಿವೆ. 'ಉಡ್ತಾ ಪಂಜಾಬ್'ನಲ್ಲಿ ಆಕೆಯ ಅಭಿನಯ ನೋಡಿದವರು, ಈಕೆ ಪಳಗಿದ ಯಾವ ಹಿರಿಯ ನಟಿಯರಿಗೂ ಕಡಿಮೆ ಇಲ್ಲ ಎಂದು ತಲೆದೂಗಿದ್ದರು. 'ಹೈವೇ' ಮತ್ತು 'ಡಿಯರ್ ಝಿಂದಗಿ' ಚಿತ್ರದಲ್ಲೂ ಆಲಿಯಾ ಅತಿಹೆಚ್ಚು ಮೆಚ್ಚುಗೆ ಗಳಿಸಿಕೊಂಡಾಕೆ. ಈಗ ಹರಿಂದರ್ ಸಿಕ್ಕಾ ಬರೆದ ಕಾದಂಬರಿ 'ಸೆಹಮತ್' ಚಿತ್ರದಲ್ಲಿ ಇನ್ನೊಂದು ವಿಭಿನ್ನ ಪಾತ್ರಕ್ಕೆ ಆಲಿಯಾ ತಯಾರಾಗಿದ್ದಾಳೆ. ಈ ಚಿತ್ರದ ನಿರ್ದೇಶಕಿ ಮೇಘನಾ ಗುಲ್ಜಾರ್.

'ಸೆಹಮತ್' ಚಿತ್ರದಲ್ಲಿ ಮತ್ತೊಮ್ಮೆ ವಿಭಿನ್ನ ಅಭಿನಯ ಅವಕಾಶ ಆಲಿಯಾಗೆ ಸಿಕ್ಕಿದೆ. ಪಾಕಿಸ್ತಾನದ ಗೂಢಚರ್ಯೆ ಇಲಾಖೆಯ ಅಧಿಕಾರಿಯೊಬ್ಬನನ್ನು ಮದುವೆಯಾಗುವ ಕಾಶ್ಮೀರಿ ಮಹಿಳೆಯ ಪಾತ್ರವಿದು. ಈ ಮದುವೆಯ ಮೂಲಕ ಪಾಕಿಸ್ತಾನದ ಗೂಢಚರ್ಯೆಯ ರಹಸ್ಯಗಳನ್ನು ಭಾರತದ ಇಲಾಖೆಗೆ ಒಪ್ಪಿಸುವ ಕೆಲಸ ಈ ಹೀರೋಯಿನ್‌ಳದ್ದು.

ರಣಬೀರ್ ಕಪೂರ್ ಜತೆಗೆ ಆಲಿಯಾ ನಟಿಸಿರುವ 'ಡ್ರ್ಯಾಗನ್' ಚಿತ್ರದ ಅಭಿನಯದ ಬಗ್ಗೆಯೂ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ. ಈ ಮಧ್ಯೆ ಪ್ರಶಸ್ತಿ ವಿಜೇತ ನಿರ್ದೇಶಕಿ ಜೋಯಾ ಅಖ್ತರ್, ಹೊಸ ಚಿತ್ರದಲ್ಲಿ ರಣಬೀರ್ ಸಿಂಗ್ ಮತ್ತು ಆಲಿಯಾಳನ್ನು ಜತೆಯಾಗಿಸಿ 'ಅಲ್ಲಿ ಬಾಯ್' ಶೂಟಿಂಗ್ ನಡೆಸಿದ್ದಾಳೆ. ಈ ಚಿತ್ರಕ್ಕೆ ಸಂಭಾಷಣೆಯನ್ನು ಜೋಯಾ ಸೋದರ ಫರ್ಹಾನ್ ಅಖ್ತರ್ ಬರೆದಿದ್ದಾನೆ. ಜೋಯಾ ಈ ಹಿಂದೆ ನಿರ್ದೇಶಿಸಿರುವ 'ಜಿಂದಗಿ ನ ಮಿಲೇ ದುಬಾರಾ' ಮತ್ತು 'ದಿಲ್ ಧಡಕ್‌ನೇ  ದೋ' ಎರಡೂ ಅತ್ಯುತ್ತಮ ವಿಭಿನ್ನ ಚಿತ್ರಗಳೆಂದು ಹೆಸರು ಮತ್ತು ಹಣ ಎರಡನ್ನೂ ಪಡೆದಿವೆ. ಈಗ ಆಕೆಯ ಹೊಸ ಚಿತ್ರದಲ್ಲಿ ಪಾತ್ರ ಸಿಕ್ಕಿದ್ದು ಆಲಿಯಾ ಖುಷಿಯನ್ನು ಇಮ್ಮಡಿಸಿದೆ. ಒಟ್ಟಾರೆ ಆಲಿಯಾ ಮುಟ್ಟಿದ್ದೆಲ್ಲ ಚಿನ್ನವಾಗುತ್ತಿರುವುದು ಸುಳ್ಳಲ್ಲ.

■ ಬಿಂದು